ಅ) ಪೇದೆಗಳ ಕೊರತೆಯಿಂದ ಕಳ್ಳತನ ತಪ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ರಾತ್ರಿ ಹೊತ್ತು ಬೀಟ್ ಜಾಸ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಈ) ಬಸ್ ಸ್ಟ್ಯಾಂಡಿನಲ್ಲಿ ಸರಗಳ್ಳರನ್ನು ಹಿಡಿಯಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

ಅ) ಹಿಂದಿನ ಒಂದು ವರ್ಷದಲ್ಲಿ ತುರುವೇಕೆರೆ ಠಾಣಾ ವ್ಯಾಪ್ತಿಯಲ್ಲಿ ಒಂದು ದರೋಡೆ ಪ್ರಕರಣ ಮಾತ್ರ ವರದಿಯಾಗಿದ್ದು, ಈ ಪ್ರಕರಣವು ತುರುವೇಕೆರೆ ಠಾಣೆ ಮೊಕದ್ದಮೆ ಸಂಖ್ಯೆ: 55:2000 395, 427, ದಿನಾಂಕ 28-3-2000ರಂದು ದಾಖಲಾಗಿರುತ್ತದೆ ತುರುವೇಕೆರೆ ನಗರವನ್ನು 4 (ನಾಲ್ಕು) ಗಸ್ತುಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಗಸ್ತಿಗೆ ಒಬ್ಬೊಬ್ಬ ಪೇದೆಯನ್ನು ಠಾಣೆ ಗಸ್ತಿನ ಕರ್ತವ್ಯಕ್ಕೆ ನೇಮಕ ಮಾಡಲಾಗುತ್ತಿದೆ.

ಆ) ತುರುವೇಕೆರೆ ಠಾಣೆಗೆ 1 ಪಿ ಎಸ್ ಐ 2 ಎ ಎಸ್ ಐ 9 ಮುಖ್ಯ ಪೇದೆ ಹಾಗೂ 25 ಪೇದೆಗಳ ಸಿಬ್ಬಂದಿ ಬಲ ಮಂಜೂರಾಗಿದ್ದು, ಈ ಠಾಣೆಗೆ ಸಿಬ್ಬಂದಿ ಕೊರತೆಯಿರುವುದಿಲ್ಲ.

ಇ) ತುರುವೇಕೆರೆ ನಗರವನ್ನು 4 ರಾತ್ರಿ ಗಸ್ತಿನ ಬೀಟುಗಳನ್ನಾಗಿ ವಿಂಗಡಿಸಿದ್ದು, ಪ್ರತಿಯೊಂದು ಗಸ್ತಿಗೂ ಒಬ್ಬೊಬ್ಬ ಪೇದೆಯನ್ನು ನೇಮಕ ಮಾಡಲಾಗುತ್ತಿದೆ. ಅಪರಾಧಗಳನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಳ್ಳಲಾಗುತ್ತಿದ್ದು ರಾತ್ರಿ ಗಸ್ತಿನಲ್ಲಿ ಸಾರ್ವಜನಿಕರು ಸಹ ಭಾಗವಹಿಸುತ್ತಿದ್ದಾರೆ.

ಈ) ಪ್ರಸಕ್ತ ಸಾಲಿನಲ್ಲಿ ಹಾಗೂ ಹಿಂದಿನ ಸಾಲಿನಲ್ಲಿ ಸರಗಳ್ಳತನ ಪ್ರಕರಣಗಳು ತುರುವೇಕೆರೆ ಠಾಣೆ ವ್ಯಾಪ್ತಿಯಲ್ಲಿ ವರದಿಯಾಗುವುದಿಲ್ಲ. ಆದಾಗ್ಯೂ ಸಹ ಇಂತಹ ಪ್ರಕರಣಲನ್ನು ತಡೆಗಟ್ಟುವ ಸಲುವಾಗಿ ತುರುವೇಕೆರೆ ಬಸ್ ನಿಲ್ದಾಣಕ್ಕೆ ಒಬ್ಬ ಮುಖ್ಯ ಪೇದೆ ಹಾಗೂ ಇಬ್ಬರು ಪೇದೆಗಳನ್ನು ಪ್ರತಿದಿನವೂ ನೇಮಕ ಮಾಡಲಾಗುತ್ತಿದೆ.

ಕೆ.ಆರ್. ಮಾರುಕಟ್ಟೆ ಪ್ರದೇಶದ ಸಿಲ್ವರ್ ಜ್ಯುಬಿಲಿ ಪಾರ್ಕ್ ರಸ್ತೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಸ್ ತಂಗುದಾಣ

1248 (1361) ಶ್ರೀ ಪಿ.ಸಿ. ಮೋಹನ್, ಚಿಕ್ಕಪೇಟೆ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದ ಸಮೀಪದ ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆಯಲ್ಲಿ ಬಸ್ ತಂಗುದಾಣವನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಆ) ಇದ್ದಲ್ಲಿ, ಯೋಜನೆಯ ಈ ಕಾಮಗಾರಿಯನ್ನು ಯಾರು ಯಾರಿಗೆ ವಹಿಸಲಾಗಿದೆ? (ಪೂರ್ಣ ವಿವರಗಳನ್ನು ನೀಡುವುದು)

ಇ) ಬಸ್ ತಂಗುದಾಣ ನಿರ್ಮಿಸುವುದರಿಂದ ಸ್ಥಳೀಯ ವ್ಯಾಪಾರಿಗಳಿಗೆ ತೊಂದರೆ ಯಾವುದಿಲ್ಲವೇ?

ಈ) ಸ್ಥಳೀಯ ವ್ಯಾಪಾರಿಗಳು ಈ ಬಗ್ಗೆ ಪ್ರತಿಭಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ) ಸಿಟಿ ಮಾರುಕಟ್ಟೆ ವೃತ್ತದಲ್ಲಿ ಹಾಲಿ ಚಂದ್ರ ಭವನದ ಮುಂದೆ ಇರುವ ಬಸ್ ನಿಲ್ದಾಣವನ್ನು ಪ್ರಯಾಣಿಕರಣನು ಇಳಿಸಲು ಮಾತ್ರ ಉಪಯೋಗಿಸಿಕೊಂಡು, ಸಿಲ್ವರ್ ಜ್ಯೂಬಿಲಿ ಪಾರ್ಕ್ ರಸ್ತೆಯಲ್ಲಿ ಮಸೀದಿ ಅಡ್ಡರಸ್ತೆಯಿಂದ ಬಸ್ ತಂಗುದಾಣ ನಿರ್ಮಿಸುವ ಬಗ್ಗೆ ಯೋಜನೆಯು '' ಸಿರಸಿ ವೃತ್ತದಿಂದ ಟೌನ್ ಹಾಲ್ ರವರೆಗೆ ನಿರ್ಮಿಸಿರುವ ಮೇಲು ಸೇತುವೆಯ '' ಮೂಲ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿದೆ.

ಈ ಕಾಮಗಾರಿಯನ್ನು ಮೆಃ ಎಲ್ ಅಂಡ್ ಟಿ ಸಂಸ್ಥೆಯವರಿಗೆ ವಹಿಸಲಾಗಿದೆ.

ಇ) ಇಲ್ಲ

ಈ) ಸ್ಥಳೀಯ ವ್ಯಾಪಾರಿಗಳಿಗೆ ತೊಂದರೆಯಾಗದಂತೆ, ವ್ಯಾಪಾರಿಗಳು, ಸಂಚಾರಿ ಪೋಲೀಸ್ ಹಾಗೂ ತಜ್ಞರೊಡನೆ ಚರ್ಚಿಸಿ ಬಸ್ ನಿಲ್ದಾಣವನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬೆಂಗಳೂರು ಮಹಾನಗರ ಪಾಲಿಕೆ ಲೆಕ್ಕಪತ್ರ ವರದಿ

1249 (1362) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ ಖರ್ಚು ಮಾಡಿದ ಹಣಕ್ಕೆ ಲೆಕ್ಕ ಹಾಗೂ ಲೆಕ್ಕ ಪರಿಶೋದನಾ ವರದಿ ಇಲ್ಲದಿರುವ ಅಂಶ ಸರ್ಕಾರಕ್ಕೆ ಬಂದಿದೆಯೇ;

ಆ) ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಹಣ ಏನಾಗಿದೆ? ಸದ್ಬಳಿಕೆ ಯಾಗಿದೆಯೇ? ಅಥವಾ ದುರುಪಯೋಗವಾಗಿದೆಯೇ; ಇದರ ಬಗ್ಗೆ ಖಚಿತ ಉತ್ತರ ಸಿಗದಂತಾಗಿರುವುದು ನಿಜವೇ?

ಇ) ಸದರಿ ಪಾಲಿಕೆಯಲ್ಲಿ ಲೆಕ್ಕ ಪರಿಶೋಧಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಇದ್ದರೆಯೇ? ನಿರ್ವಹಿಸಲು ಇಲ್ಲದಿದ್ದಲ್ಲಿ ಖಾಸಗಿ ಲೆಕ್ಕ ಪರಿಶೋಧಕರಿಗೆ ಏಕೆ ಅನುಮತಿ ನೀಡಬಾರದು? (ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು)

ಅ) 1995-96 ನೇ ಸಾಲಿನವರೆಗೆ ಲೆಕ್ಕ ಪರಿಶೋಧನಾ ಕಾರ್ಯವನ್ನು ನಿರ್ವಹಿಸಿ ವರದಿಗಳನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಗೆ ನಿಲ್ಲಿಸಲಾಗಿದೆ.

ಆ) ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಹಣ ಉದ್ದೇಶಿತ ಕಾಮಗಾರಿಗಳಿಗಾಗಿ ಖರ್ಚಾದ ಹಣದ ಬಗ್ಗೆ ಬಿಲ್ಲುಗಳನ್ನು ಪಾವತಿಸುವ ಮೊದಲು ಆಡಿಟ್ ಮಾಡಿಸಿ ನಂತರ ಬಿಲ್ಲುಗಳನ್ನು ಪಾವತಿಸಲಾಗುತ್ತದೆ.